

ಮಂಗಳೂರಿನ ದಕ್ಕೆಯಲ್ಲಿ ಲಂಗರು ಹಾಕಿದ ದೋಣಿಗಳು
ಚಿತ್ರ: ಫಕ್ರುದ್ದೀನ್ ಎಚ್

(ಇಂಜೆಕ್ಷನ್), ವೃಕ್ಷ (ರಿಕ್ಷಾ), ಇನ್ಸ್ ಪಟ್ಲೇರ್ (ಇನಸ್ಪೆಕ್ಟರ್), ಗ್ರಾಣ (ಗ್ರಹಣ), ಮೈದಾನ (ಮಧ್ಯಾಹ್ನ), ಇಮಾನ (ವಿಮಾನ) ಇತ್ಯಾದಿತ್ಯಾದಿ.

ಒಣಸ್ ಗಮ್ಮತ್ತಾ? ಒಂದು ಸಮಾರಂಭಕ್ಕೆ ಹೋಗಿ ಬಂದವರ ಬಳಿ ಹೀಗೆ ಕೇಳುವುದು ವಾಡಿಕೆ. ಊಟ ಭರ್ಜರಿಯಾಗಿತ್ತೇ ಎನ್ನುವ ಭಾವ ಇದು. ಜನ ಮಸ್ತ್ ಸೇರಿರಬಹುದಲ್ವ? ಹೌದಪ್ಪ, ಊಟದ ಹೊತ್ತಿಗೆ ತುಂಬ ರಶ್ಶ್ ಇತ್ತು. ಆಮೇಲೆ ಬೊಳ್ಳ (ಪ್ರವಾಹ)ದ ಮರುದಿವ್ಸ ಬೊಟ್ಟ (ಒಣ ನೆಲ) ಅನ್ನುವ ಹಾಗೆ ಇಡೀ ಹೋಲ್ ಖಾಲಿ ಎಂಬುದು ಸಮಾರಂಭದ ವರ್ಣನೆ. ನೆಂಟ್ರು ತುಂಬ ಜನ ಬಂದಿದ್ರಾ? ಇಲ್ಲ ಮಾರಾಯ, ಪುರ್ಸೊತ್ತ್ ಬೇಕಲ್ಲ? ಕರ್ಮದ್ದ್ ಒಬ್ಬೊಬ್ರಿಗೂ ಒಂದೊಂದ್ ತಾಪತ್ರಯ. ಮದುವೆಗೆ ಬದಿ ಗಿದಿ (ವರದಕ್ಷಿಣೆ) ಇತ್ತಾ? ಅದೆಲ್ಲ ಕಾಲ ಹೋಯ್ತ್. ಈಗ ಹಣ ಕೊಡ್ತೇನೆಂದ್ರೂ ಹುಡುಗಿ ಸಿಗ್ತಿಲ್ಲ. ಹುಡುಗ ಬದಿ ಬಂಗಾರು ಒಂದೂ ಬೇಡ ಹುಡ್ಗಿ ಕೊಟ್ರೆ ಸಾಕು ಅಂದ್ನಂತೆ. ಮದುವೆಗೆ ದೇಸೆ (ಉಡುಗೊರೆ) ಕೂಡ ಇಲ್ಲ ಇದು ಮದುವೆ ಮನೆ ವರ್ಣನೆ. ಒಂದು ಮನೆಯಿಂದ ಹುಡುಗಿ ತಂದು ಅದೇ ಮನೆಗೆ ಹುಡುಗಿ ಕೊಟ್ಟರೆ ಕೋಣ, ಎತ್ತುಗಳನ್ನು ಅದಲು ಬದಲು ಮಾಡಿಕೊಂಡರೆ ಪೋರ್ಚೆ ಮಾಡಿದ್ದು ಎನ್ನುವ ಪದ ಬಳಕೆ.

ಅವನಾ? ಬರೇ ಕುಡ್ಚೇಲ. ಕುಡಿದು ಕುಡಿದೇ ಮನೆ ಲಗಾಡಿ ಮಾಡಿಬಿಟ್ಟ ಕುಡುಕನೊಬ್ಬನ ಪುರಾಣ ಬಿಚ್ಚಿಡುವುದು ಹೀಗೆ. ಅವನನ್ನು ಕುಡಿತ ಬಿಡುವ ಶಿಬಿರಕ್ಕೆ ಸೇರಿಸಿದ್ರಂತೆ. ಅಲ್ಲಿಂದ ಒಂದೇ ದಿನಕ್ಕೆ ಇವ ಪದ್ರಾಡ್ (ಎಸ್ಕೇಪ್). ಎಲ್ಲ ಹುಡಿಕಿದ್ರೂ ಇವ್ನ ಎಡ್ರೆಸ್ ಇಲ್ಲ. ಮತ್ತೆ ನೋಡುವಾಗ ಚರ್ಡಪ್ಪ ಕಾಮತರ ಹೋಟೆಲಿನ ಹಿಂದೆ ಒಂದು ಮದಕ (ಕೆರೆ) ಉಂಟಲ್ಲ. ಅದಕ್ಕೆ ಹಾರಿ ಸುಚ್ಚ್ (ಸ್ವಿಚ್ಚ್) ಆಫ್ ಮಾಡಿಕೊಂಡಿದ್ನಂತೆ. ಈ ಮೂರು ಕಾಸಿನವ ಊರಿಡೀ ಸಾಲ ಮಾಡಿ ಎಲ್ರಿಗೂ ಪತ್ತಾಯಿಸಿ (ಮೋಸ) ಈಗ ಮೇಲಿನ ಲೋಕಕ್ಕೆ ಹೋಗಿದ್ದಾನೆ. ಕೊಟ್ಟವರಿಗೆ ಶಂಖವೇ ಗತಿ. ಆಟದಲ್ಲಿ ಆಸ್ಯಗಾರರು ಹೇಳ್ತಾರಲ್ಲ, ಮುದುಕನನ್ನು ನಂಬಿದ್ರೂ ಕುಡುಕನನ್ನು ನಂಬಬೇಡ ಅಂತ. ಇವ್ನ ಕತೆ ಹೇಳುವುದಾದ್ರೆ ಅ(ಹ)ಲವು ಉಂಟು.

ಕಳೆದ ವಾರದ 'ಚೆನ್ನುಡಿ'
'ನೋಡು ಬಾ ನೋಡು ಬಾ ನಮ್ಮೂರ' ಕೇಳಿ
**ಶಾರದಾ ಬಾಣದ** ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ನೀವು ಬೇರೆ ಊರಿನವರು. ಇಲ್ಲಿಗೆ ಬಂದಿದ್ದೀರಿ. ನಿಮಗೆ ಯಾರದೋ ಮನೆಗೆ ಹೋಗಬೇಕು. ಅಲ್ಲಿದ್ದವನೊಂದಿಗೆ ದಾರಿ ಕೇಳಿ. ಹೆಚ್ಚಿನವರ ಹಾಗೆಯೇ ಅವನು ಕೂಡ, ನೀವೊಂದು ಕೆಲಸ ಮಾಡಿ ಎನ್ನುತ್ತಾನೆ. ಎಂಥ ಕೆಲಸವಪ್ಪ, ದಾರಿ ಕೇಳಿದರೆ ಕೆಲಸ ಮಾಡಬೇಕಾ? ಅಂತ ಗಾಬರಿಯಾಗಬೇಡಿ. ಇಲ್ಲಿಂದ ಅರ್ಧ ಮೈಲು ದೂರ ಹೋದರೆ ಅಲ್ಲಿ ಒಂದು ದೇವಸ್ಥಾನ ಉಂಟು. ಅದ್ರ ಭಟ್ರಿಗೆ ಈ ಜನದ ವಿಚಾರ ಎಲ್ಲ ಡಿಟೈಲ್ ಗೊಂತುಂಟು. ಸೀದ ಅಲ್ಲಿಗೆ ಹೋಗಿ ಎನ್ನುತ್ತಾನೆ. ಅಯ್ಯೋ ನನಗೆ ಹಾಗೆಲ್ಲ ಹುಡುಕಿಕೊಂಡು ಹೋಗಲಿಕ್ಕೆ ಆಗುವುದಿಲ್ಲ ಎಂದಿರಾ? ಹಾಗಿದ್ರೆ ನೀವೊಂದು ಕೆಲಸ ಮಾಡಿ. ಒಂದು ರಿಕ್ಷಾ ಮಾಡಿಕೊಂಡು ಹೋಗಿ. ಇಲ್ಲೇ ತಿರ್ಗಾಸಿ (ತಿರುವು)ನಲ್ಲಿ ಒಂದು ದೊಂಪ(ಚಪ್ಪರ)ದ ಕೆಳಗೆ ರಿಕ್ಷಾ ನಿಂತಿರ್ತದೆ ಎನ್ನುವ ಅವನ ಬಳಿ ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದೆಯಾದರೂ ಒಂದು ಕೆಲಸ ಮಾಡಿ ಎನ್ನದೆ ಅವನು ಸುಲಭವಾಗಿ ಅದನ್ನು ಹೇಳಿಬಿಡುವುದಿಲ್ಲ.

ಜಿಲ್ಲೆಗೆ ಬಂದವರು ಯಾರಾದರೂ ಹೋಗುವುದಿದ್ದರೆ, ನೀವು ದೂರ ಹೋಗುತ್ತಿದ್ದೀರಿ? ಕೇಳಿಬಿಡಿ, ಎಲ್ಲಿಗೆ ಹೋಗುತ್ತಿದ್ದೀರಿ?ಎಂದು ಕೇಳಿದರೆ ಅಪಶಕುನ. ನಿಮ್ಮ ಪತ್ನಿ ಜೊತೆಗಿದ್ದರೆ, ಇದು ನನ್ನ ಹೆಂಡತಿ ಅಂತ ಹೇಳಿ. ನಮ್ಮ ಹೆಂಡತಿ ಅಂತ ಬಹುವಚನ ಪ್ರಯೋಗ ಬೇಡ. ನಿಮಗೆ ಮಾತ್ರ, ನನಗಲ್ಲ ಅಂತ ಉತ್ತರ ಬಂದೀತು. ಅಂಗಳಕ್ಕೆ ಹೋದರೆ, ನಾಯಿ ಉಂಟಾ? ಕೇಳಿದರೆ, ನಾಯಿ ಉಂಟು, ಕೊಡುವುದಿಲ್ಲ ಅಂತಲೇ ಹೇಳಿಯಾರು. ಹೀಗಾಗಿ, ನಾಯಿ ಕಚ್ಚುತ್ತದಾ?ಅಂತ ಕೇಳುವುದು ಉತ್ತಮ. ಬುದ್ಧಿವಂತರ, ಸುಸಂಸ್ಕೃತರ ಜಿಲ್ಲೆ. ಸಿನಿಮಾದವರಿಗೆ ಈ ಜಿಲ್ಲೆಯ ಜನರ ಭಾಷೆ ಅಂತ ಗ್ರಾಂಥಿಕ ಕನ್ನಡವನ್ನು ಪಾತ್ರಗಳ ಬಾಯಲ್ಲಿ ಮಾತನಾಡಿಸುವುದೆಂದರೆ ಒಂಥರಾ ಕುಷಿ.



ಕೋಳಿ ಅಂಕ